

ಒಂದು ದಟ್ಟ ಕಾಡಿನಲ್ಲಿ ಹುಲಿರಾಣಿಯು ತನ್ನ ಪುಟ್ಟಮರಿಯೊಡನೆ ಮರದ ಕೆಳಗೆ ವಿರಮಿಸುತ್ತಿತ್ತು. ಆಗತಾನೆ ಬೇಟೆಯಾಡಿ ಪುಷ್ಕಳ ರಾಜಭೋಜನವನ್ನು ಮುಗಿಸಿದ್ದ ತಾಯಿ ಹುಲಿಗೆ ನಿದ್ದೆ ಹತ್ತಿತ್ತು. ಆದರೆ, ತುಂಟ ಮರಿಯು ಆಟವಾಡುತ್ತಾ, ಅಲ್ಲೇ ಇದ್ದ ಬಿದಿರಿನ ಮೆಳೆಯೊಳಗೆ ನುಸುಳಿ ಹೊರಬರಲಾಗದೆ ಒದ್ದಾಡುತ್ತಿತ್ತು. ತನ್ನ ಕಂದನ ಒದರಾಟಕ್ಕೆ ಹುಲಿರಾಣಿಗೆ ಎಚ್ಚರವಾಯಿತು. ಎಷ್ಟು ಪ್ರಯತ್ನಪಟ್ಟರೂ ಒತ್ತಟ್ಟಿಗೆ ಬೆಳೆದ ಬಿದಿರಿನ ಬೊಂಬುಗಳ ಮಧ್ಯೆ ನುಸುಳಿ ತನ್ನ ಮರಿಯನ್ನು ಹೊರತರಲಾಗದೆ ಆತಂಕದಿಂದ ಘರ್ಜಿಸುತ್ತಿತ್ತು. ಹುಲಿಯ ಘರ್ಜನೆಯ ಜಾಡು ಹಿಡಿದ ಕಪಿ ನಾಯಕನು ತನ್ನ ಬಂಟರೊಂದಿಗೆ ಓಡೋಡಿ ಬಂದು ಹುಲಿರಾಣಿಯ ಮುಂದೆ ವಿನಮ್ರತೆಯಿಂದ ನಿಂತನು. ಹುಲಿಯು ಕಪಿನಾಯಕನಿಗೆ, 'ಬಿದಿರಿನ ಮೆಳೆಯ ನಡುವೆ ಸಿಲುಕಿ ಅಪಾಯದಲ್ಲಿರುವ ನನ್ನ ಮರಿಯನ್ನು ಹೊರಗೆ ತಾ' ಎಂದು ಆಜ್ಞಾಪಿಸಿತು. ತಕ್ಷಣ ಕಪಿ ಬಂಟರು ತಮ್ಮ ನಾಯಕನ ಸೂಚನೆಯಂತೆ ತಮ್ಮೆಲ್ಲಾ ಚಾಕಚಕ್ಯತೆಯಿಂದ ಹುಲಿಮರಿಯನ್ನು ಎತ್ತಿ ಹೊರತಂದವು. ಸಂತುಷ್ಟವಾದ ಹುಲಿರಾಣಿಯು, 'ಕಪಿ ನಾಯಕನೇ ನಿನ್ನ ಸ್ವಾಮಿನಿಷ್ಠೆಯನ್ನು ಮೆಚ್ಚಿದ್ದೇನೆ, ಹೇಳು ಈ ಕಾಡಿನಲ್ಲಿ ನಿಮ್ಮ ವಾನರ ಬಳಗಕ್ಕೆ ಯಾರಿಂದಲಾದರೂ ತೊಂದರೆ ಇದೆಯೇ, ನಾನು ಬಗೆಹರಿಸುತ್ತೇನೆ' ಎಂದಿತು. ಆಗ ಕಪಿ ನಾಯಕನು,'ಓ ರಾಜಮಾತೆಯೇ, ಪಕ್ಕದ ಕಾಡಿಂದ ಒಂದು ಉಪದ್ರವಿ ಚಿರತೆಯು ಬಂದು ಸೇರಿಕೊಂಡಿದೆ. ನಮಗಿಂತ ಬಲಶಾಲಿ ಪ್ರಾಣಿಯು, ಆಹಾರಕ್ಕಾಗಿ ನಮ್ಮನ್ನು ಹಿಡಿದು ತಿಂದರೆ ಅದನ್ನು ಯಾರು ಪ್ರಶ್ನಿಸುವಂತಿಲ್ಲ. ಅದು ಅರಣ್ಯನ್ಯಾಯ. ಆದರೆ, ಈ ವಿಕೃತ ಮನಸ್ಸಿನ ಚಿರತೆ ವಿನೋದಕ್ಕಾಗಿ ನಮ್ಮನ್ನು ಮರದ ಮೇಲೆ ಅಟ್ಟಾಡಿಸುತ್ತಾ ಚೆಲ್ಲಾಟವಾಡುತ್ತದೆ. ಮೊನ್ನೆ ನನ್ನ ತಮ್ಮ ಈ ಚಿರತೆಯಿಂದ ತಪ್ಪಿಸಿಕೊಳ್ಳಲು ಕೊಂಬೆಯಿಂದ ಕೊಂಬೆಗೆ ಜಿಗಿಯುವ ಧಾವಂತದಲ್ಲಿ ಮರದ ಕೆಳಗಿನ ಬಂಡೆಯ ಮೇಲೆ ಬಿದ್ದು ತಲೆ ಹೊಡೆದು ಸತ್ತೇ ಹೋದನು. ಅಲ್ಲದೆ ಪಕ್ಷಿಗಳ ಗೂಡನ್ನು ಕೆಡವಿ ಕೆಳಗೆ ದೂಡುತ್ತದೆ. ತನ್ನ ದೂರದ ಸಂಬಂಧಿ ಎಂಬ ಕುಲ ಕಕ್ಕುಲತೆಯನ್ನೂ ಮರೆತು ಕಾಡು ಬೆಕ್ಕುಗಳನ್ನು

